KARNATAKA POLICE

# ಕರ್ನಾಟಕ ಸರಕಾರ
# ಸೈಬರ್, ಎಕನೊಮಿಕ್ & ನಾರ್ಕೊಟಿಕ್ ಅಪರಾಧ ಪೊಲೀಸ ಠಾಣೆ
# ಉತ್ತರಕನ್ನಡ ಜಿಲ್ಲೆ

---

# ಪತ್ರಿಕಾ ಪ್ರಕಟಣೆ

**ವಿದೇಶದಲ್ಲಿ ಉದ್ಯೋಗ ಕೊಡಿಸುವುದಾಗಿ ಸಾಮಾಜಿಕ ಜಾಲತಾಣದಲ್ಲಿ ಸಾರ್ವಜನಿಕರನ್ನು ನಂಬಿಸಿ ಅವರಿಂದ ಹಣ ಪಡೆದು ಮೋಸ ಮಾಡುತ್ತಿದ್ದ ರಾಜ್ಯ ಹಾಗೂ ಹೊರ ರಾಜ್ಯದ ಸೈಬರ್ ಕ್ರೈಂ ವಂಚಕರ ಬಂಧನ**

ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲೂಕ ಗುಣವಂತೆ, ಮುಗಳ ನಿವಾಸಿಯಾದ ಕುಮಾರಿ ನೇತ್ರಾವತಿ ನಾಗಪ್ಪಾ ಗೌಡಾ ಇವರ ಈ-ಮೇಲ್ ಖಾತೆಗೆ ಯಾರೋ ಆಸಾಮಿಗಳು ಈ-ಮೇಲ್ ಮುಖಾಂತರ ಸಂಪರ್ಕಿಸಿ ಅವರಿಗೆ ಅಮೇರಿಕಾ ದೇಶದಲ್ಲಿ ಉದ್ಯೋಗ ಕೊಡಿಸುವುದಾಗಿ ಹೇಳಿದ್ದು, ಅದನ್ನು ಪಿರ್ಯಾದಿಯವರು ಅವರನ್ನು ನಂಬಿ ಅವರು ನೀಡಿರುವ ಮೊಬೈಲ್ ನಂಬರ ಹಾಗೂ ಈ-ಮೇಲ್ ವಿಳಾಸಕ್ಕೆ ಸಂಪರ್ಕಿಸಿದ್ದು ಇರುತ್ತದೆ.

ಸದ್ರಿ ಆರೋಪಿತರು ಪಿರ್ಯಾದಿಯವರಿಗೆ ವಾಟ್ಸಪ್ ಮುಖಾಂತರ ಪ್ರಶ್ನೆ ಪತ್ರಿಕೆಯನ್ನು ಕಳುಹಿಸಿಕೊಟ್ಟು ಅದಕ್ಕೆ ಉತ್ತರಿಸುವಂತೆ ಹೇಳಿದ್ದು ಅದರಂತೆ ಪಿರ್ಯಾದಿಯವರು ಅವರು ನೀಡಿರುವ ಪ್ರಶ್ನೆ ಪತ್ರಿಕೆಗೆ ಉತ್ತರವನ್ನು ಕಳುಹಿಸಿಕೊಟ್ಟಿರುತ್ತಾರೆ. ನಂತರದಲ್ಲಿ ಸದರಿ ಆಸಾಮಿಗಳು ಪಿರ್ಯಾದಿಯವರಿಗೆ ವಿದೇಶದಲ್ಲಿ ಉದ್ಯೋಗ ಕೊಡಿಸುವ ಭರವಸೆ ನೀಡಿ ಅವರಿಂದ ಪಾಸ್‌ಪೋರ್ಟ ಚಾರ್ಜ, ವಿಸಾ ಚಾರ್ಜ, ಮೆಡಿಕಲ್ ರಿಪೋರ್ಟ, ಅಪ್ಲಿಕೇಶನ್ ಪ್ರೋಸೆಸಿಂಗ ಚಾರ್ಜ, ಎನ್.ಓ.ಸಿ ಫೀಸ್, ಹೆಲ್ತ್ ಇನ್ಸುರೆನ್ಸ ಫೀಸ್ ಇತ್ಯಾದಿ ಹೀಗೆ ವಿವಿಧ ತೆರಿಗೆ, ಸುಂಕ ಕಟ್ಟುವಂತೆ ತಿಳಿಸಿದ ಮೇರೆಗೆ ಅದರಂತೆ ಫಿರ್ಯಾದಿಯವರು ಅವರ ಮಾತನ್ನು ನಂಬಿ ಅವರು ಹೇಳಿದಂತೆ ಅವರು ನೀಡಿದ ಒಟ್ಟು 17 ಬ್ಯಾಂಕ ಖಾತೆಗಳಿಗೆ (ಕರ್ನಾಟಕ, ತ್ರಿಪುರಾ, ಆಸ್ಸಾಂ, ತಮಿಳನಾಡು, ಮಣಿಪುರ, ಗುಜರಾತ, ದೆಹಲಿ ರಾಜ್ಯದಲ್ಲಿರುವ ಬ್ಯಾಂಕಗಳಿಗೆ) ದಿನಾಂಕ: 13-08-2020 ರಿಂದ 17-01-2021 ರ ವರೆಗೆ ಒಟ್ಟು ರೂ **57,14,749=00** ನೇದನ್ನು ವರ್ಗಾವಣೆ ಮಾಡಿಸಿಕೊಂಡು ಮೋಸ ಮಾಡಿದ್ದು ಇರುತ್ತದೆ.

ಈ ಬಗ್ಗೆ ದಿನಾಂಕ:10-02-2021 ರಂದು ಸಿ.ಇ.ಎನ್ ಅಪರಾಧ ಪೊಲೀಸ ಠಾಣೆಯಲ್ಲಿ ಪ್ರಕರಣ ದಾಖಲಾಗಿ ಸಿ.ಇ.ಎನ್ ಅಪರಾಧ ಪೊಲೀಸ ಠಾಣೆಯ ಪೊಲೀಸ ನಿರೀಕ್ಷಕರಾದ ಶ್ರೀ ಸೀತಾರಾಮ ಪಿ, ಹಾಗೂ ಅವರ ಸಿಬ್ಬಂದಿಗಳು ತಕ್ಷಣ ಪ್ರಕರಣದ ತನಿಖೆಯನ್ನು ಮುಂದುವರೆಸಿ ಆರೋಪಿತರು ಹಣ ವರ್ಗಾವಣೆ ಮಾಡಿಸಿಕೊಂಡ ಎಲ್ಲಾ ಬ್ಯಾಂಕ ಖಾತೆಗಳನ್ನು ಫ್ರೀಜ್ ಮಾಡಿಸಿರುತ್ತಾರೆ. ಸದರಿ ಬ್ಯಾಂಕ ಖಾತೆದಾರರ ಮಾಹಿತಿಯನ್ನು ಪಡೆದುಕೊಂಡು ತಾಂತ್ರಿಕವಾಗಿ ವಿಶ್ಲೇಷಣೆ ಮಾಡಿರುತ್ತಾರೆ.

ಆರೋಪಿತರ ಪತ್ತೆಯ ಕುರಿತು ಸಿ.ಇ.ಎನ್ ಅಪರಾಧ ಪೊಲೀಸ ಠಾಣೆಯ ಅಧಿಕಾರಿ ಹಾಗೂ ಸಿಬ್ಬಂದಿಯವರು ತಂಡವನ್ನು ರಚಿಸಿ ದಿನಾಂಕ:28-02-2021 ರಂದು ಆರೋಪಿ ಪತ್ತೆಯ ಕುರಿತು ಬೆಂಗಳೂರಿಗೆ ತೆರಳಿ ಈ ಕೆಳಕಂಡ ಆರೋಪಿತರನ್ನು ವಶಕ್ಕೆ ಪಡೆದುಕೊಂಡಿರುತ್ತಾರೆ.

| | | |
|---|---|---|
| 01 | **Ashok M.N S/o Narayanswami M.V** 26 Yrs R/o #89, Vasant Nagar, Dasarhosalli, Bangarpet, Kolar ಹಾಲಿ ವಿಳಾಸ : Plat No: FF4, Bhagyas Residency, #18, NH Block, Gangotri Layout, Ayyappa Nagarm K.R Pura, Banglore | 1) ಸದರಿ ಆರೋಪಿತನು ಹೈದ್ರಾಬಾದ ಸೈಬರ್ ಕ್ರೈಂ ಪೊಲೀಸ ಠಾಣೆಯಲ್ಲಿ ದಾಖಲಾದ ಪ್ರಕರಣಗಳಲ್ಲಿ ಆರೋಪಿತನಾಗಿರುತ್ತಾನೆ.<br>2)ಸದರಿ ಆರೋಪಿತನು ಆಸ್ಸಾಂ ಮೂಲದ ಯುವತಿಯೊಂದಿಗೆ ಸಂಪರ್ಕ ಇಟ್ಟುಕೊಂಡು ಬೆಂಗಳೂರು ಹಾಗೂ ಇತರೇ ಕಡೆಗಳಲ್ಲಿ ಉದ್ಯೋಗ ಮಾಡಿಕೊಂಡಿರುವ ಹೊರ ರಾಜ್ಯದ ವ್ಯಕ್ತಿಗಳ ಬ್ಯಾಂಕ ಖಾತೆಗಳನ್ನು ತೆರೆದು ಅವರ ಬ್ಯಾಂಕ ಖಾತೆ, ಮೊಬೈಲ್ ಸೀಮ್‌ಗಳನ್ನು ಪಡೆದು ನೈಜರೀಯನ್ ಮೂಲದ ವ್ಯಕ್ತಿಗಳಗೆ ಮಾರಾಟ ಮಾಡಿರುತ್ತಾನೆ.<br>3) ಸದರಿಯವನು ನೈಜರಿಯನ್ ಮೂಲದ ವ್ಯಕ್ತಿಗಳಗೆ ಹಣ ವರ್ಗಾವಣೆ ಹಾಗೂ ಬ್ಯಾಂಕ ಖಾತೆ ತೆರೆಯಲು ಮದ್ಯವರ್ತಿಯಾಗಿ ಕೆಲಸ ಮಾಡಿರುತ್ತಾನೆ. |
| 02 | **Bulliangir Halam S/o Somar Halam** 25Yrs R/o No: 40, Part No: 145, Pathar Kandi, Khagragura F.V, Karimganj. State: Assam ಹಾಲಿ ವಿಳಾಸ : R/o Srinivas Reddy Apartment, #114, Door No: D-1, 4th Floor, 10th Cross, Manjunath Layout, Munnekolala, Marathahalli, Bangalore. | 1)ಸದರಿಯವನ ಬ್ಯಾಂಕ ಖಾತೆಗೆ ಫಿರ್ಯಾದಿಯವರು 5,74,999=00 ಹಣವನ್ನು ವರ್ಗಾವಣೆ ಮಾಡಿದ್ದು ಇರುತ್ತದೆ.<br>2)ಸದರಿಯವನು ನೈಜರಿಯನ್ ಹಾಗೂ ಈ ಪ್ರಕರಣದ ಆಸ್ಸಾಂ ಮೂಲದ ಇತರೇ ಆರೋಪಿಗಳೊಂದಿಗೆ ನೇರ ಸಂಪರ್ಕದಲ್ಲಿದ್ದು ಸದರಿಯವರಿಗೆ ತನ್ನ ಹೆಸರಿನಲ್ಲಿ ಹಾಗೂ ಇತರೇ ಆಸ್ಸಾಂ ಮೂಲದ ವ್ಯಕ್ತಿಗಳ ಹೆಸರಿನಲ್ಲಿ ಒಟ್ಟು 17 ಬ್ಯಾಂಕ ಖಾತೆಗಳನ್ನು ಅಸ್ಸಾಂ ಹಾಗೂ ನೈಜರಿಯನ್ ಮೂಲದ ಆರೋಪಿತರಿಗೆ ಮಾರಾಟ ಮಾಡಿದವನಾಗಿರುತ್ತಾನೆ. |
| 03 | **Dartinbir Halam S/o Mualjuijoy Halam** 28 Yrs R/o No: 72, Ward No: 02, Bag Basa, Zaithang, North Tripura State: Tripura ಹಾಲಿ ವಿಳಾಸ : #21, 2nd Cross, 7th Block, Koramangala, Bangalore | ಸದರಿಯವನು ನೈಜರಿಯನ್ ಹಾಗೂ ಈ ಪ್ರಕರಣದ ಆಸ್ಸಾಂ ಮೂಲದ ಇತರೇ ಆರೋಪಿಗಳೊಂದಿಗೆ ನೇರ ಸಂಪರ್ಕದಲ್ಲಿದ್ದು ಸದರಿಯವರಿಗೆ ಇತರೇ ಆಸ್ಸಾಂ ಮೂಲದ ವ್ಯಕ್ತಿಗಳ ಹೆಸರಿನಲ್ಲಿ ಒಟ್ಟು 04 ಬ್ಯಾಂಕ ಖಾತೆಗಳನ್ನು ಮಾರಾಟ ಮಾಡಿದವನಾಗಿರುತ್ತಾನೆ ಹಾಗೂ ಹಣ ವರ್ಗಾವಣೆಯಲ್ಲಿ ಸಹಾಯ ಮಾಡಿದವನಾಗಿರುತ್ತಾನೆ. |

| | | |
|---|---|---|
| ೦4 | **Woringam Phungshok S/o Philip Phungshok**, 30 Yrs R/o Sinakeithei Village, District: Vkhrul,State:Manipur ಹಾಲಿ ವಿಳಾಸ : #1142, 7th Main, 5th Cross, 2nd Stage, Rajendra Nagar, Bangalore | 1) ಸದರಿಯವನ ಬ್ಯಾಂಕ ಖಾತೆಗೆ ಫಿರ್ಯಾದಿಯವರು 5,95,000=00 ಹಣವನ್ನು ವರ್ಗಾವಣೆ ಮಾಡಿದ್ದು ಇರುತ್ತದೆ.<br>2) ಸದರಿಯವನು ನೈಜರಿಯನ್ ಹಾಗೂ ಈ ಪ್ರಕರಣದ ಆಸ್ಸಾಂ ಮೂಲದ ಇತರೇ ಆರೋಪಿಗಳೊಂದಿಗೆ ನೇರ ಸಂಪರ್ಕದಲ್ಲಿದ್ದು ಸದರಿಯವರಿಗೆ ತನ್ನ ಹೆಸರಿನಲ್ಲಿ ಒಟ್ಟು 04 ಬ್ಯಾಂಕ ಖಾತೆಗಳನ್ನು ಮಾರಾಟ ಮಾಡಿದವನಾಗಿರುತ್ತಾನೆ ಹಾಗೂ ಹಣ ವರ್ಗಾವಣೆಯಲ್ಲಿ ಸಹಾಯ ಮಾಡಿದವನಾಗಿರುತ್ತಾನೆ. |

ಈ ಮೇಲ್ಕಂಡ ಆರೋಪಿತರಿಂದ ಈ ಕೆಳಕಂಡ ಸ್ವತ್ತುಗಳನ್ನು ವಶಪಡಿಸಿಕೊಳ್ಳಲಾಗಿರುತ್ತದೆ.

1) **ಆರೋಪಿತರ ವಿವಿಧ ಬ್ಯಾಂಕ ಖಾತೆಗಳಲ್ಲಿ ಫ್ರೀಜ್ ಮಾಡಿರುವ ನಗದು ಹಣ 2,61,528=00**
2) **ನಗದು ಹಣ 24,000=00**
3) **ಸ್ವೈಪ್ ಮಶೀನ-01**
4) **ಬಯೋಮೆಟ್ರಿಕ ಪಿಂಗರಪ್ರಿಂಟ ಥಂಬ ಮಶೀನ-01**
5) **ಜಪ್ತ ಪಡಿಸಿದ ವಿವಿಧ ಬ್ಯಾಂಕ ಅಕೌಂಟಗಳು-34**
6) **ವಿವಿಧ ಬ್ಯಾಂಕಗಳ ಎ.ಟಿ.ಎಮ್ ಕಾರ್ಡಗಳು-24**
7) **ವಿವಿಧ ಬ್ಯಾಂಕಗಳ ಚೆಕ್ ಬುಕ್‌ಗಳು-24**
8) **ಲ್ಯಾಪಟಾಪ್ -02**
9) **ಮೊಬೈಲ್‌ಗಳು-23**
10) **ಮೊಬೈಲ್ ಸೀಮಗಳು-17**
11) **ಟ್ಯಾಬ್-01**
12) **ಪೆನಡ್ರೈವ್-02**
13) **ಡೊಂಗಲ್-01**
14) **ವೈ ಪೈ ರೂಟರ್ ಮಶೀನ-01**

ಈ ಪ್ರಕರಣದಲ್ಲಿ ಇನ್ನು ಹಲವು ಮಂದಿ ನೈಜರೀಯನ್ ದೇಶದ ಹಾಗೂ ಆಸ್ಸಾಂ ರಾಜ್ಯದ ಆರೋಪಿತರು ಶಾಮೀಲಾಗಿರುವ ಬಗ್ಗೆ ತನಿಖೆಯಲ್ಲಿ ಕಂಡುಬಂದಿದ್ದು ಅವರ ಪತ್ತೆ ಹಚ್ಚುವ ಕಾರ್ಯಾಚರಣೆ ಮುಂದುವರೆದಿದೆ.

ಈ ಪ್ರಕರಣದಲ್ಲಿಯ ಆರೋಪಿತರು ವಿವಿಧ ಕಂಪನಿಯ 125 ಮೊಬೈಲ್ ನಂಬರಗಳನ್ನು ಕೃತ್ಯಕ್ಕೆ ಬಳಸಿದ್ದು ಆ ಸೀಮ್‌ಗಳನ್ನು ಆರೋಪಿತರಿಗೆ ಕಂಪನಿ ಮತ್ತು ಸೀಮ್ ಡೀಲರಗಳು ದಾಖಲಾತಿಗಳನ್ನು ಸರಿಯಾಗಿ ಪರಿಶೀಲನೆ ಮಾಡಿ ನೀಡಿದ್ದಾರೆಯೇ ಎಂಬುದರ ಬಗ್ಗೆ ಪರಿಶೀಲನೆ ನಡೆಸಿ ಈ ಬಗ್ಗೆ ಪ್ರಕರಣ ದಾಖಲಿಸುವ ಕುರಿತು ಕಾನೂನು ಸಲಹೆ ಪಡೆಯಲಾಗುವುದು.

ಈ ಪ್ರಕರಣದಲ್ಲಿ ವಶಪಡಿಸಿಕೊಂಡಿರುವ ಬ್ಯಾಂಕ ಪಾಸಬುಕ್, ಚೆಕ್‌ಬುಕ್, ಎ,ಟಿ,ಎಮ್ ಕಾರ್ಡ, ಮೊಬೈಲ್ ಪೋನ, ಸ್ವೈಪಿಂಗ ಮಶೀನ ಇವುಗಳ ಬಗ್ಗೆ ತನಿಖೆ ಮುಂದುವರೆದಿದ್ದು ಆರೋಪಿತರು ಉತ್ತರ ಕನ್ನಡ ಜಿಲ್ಲೆಯಲ್ಲಿ ದಾಖಲಾದ ಸೈಬರ ಕ್ರೈಂ ಪ್ರಕರಣ ಹಾಗೂ ರಾಜ್ಯದಲ್ಲಿ ನಡೆದಿರುವ ಸೈಬರ್ ಕ್ರೈಂ ಪ್ರಕರಣದಲ್ಲಿ ಭಾಗಿಯಾಗಿರುವ ಬಗ್ಗೆ ತನಿಖೆಯನ್ನು ಮುಂದುವರೆಸಲಾಗಿರುತ್ತದೆ. ರಾಜ್ಯದ ಎಲ್ಲಾ ಸೈಬರ ಕ್ರೈಂ ಪೋಲೀಸ ಠಾಣೆಗಳಿಗೆ ಮಾಹಿತಿ ವಿಚಾರ ವಿನಿಮಯ ಮಾಡಲಾಗುವುದು.

ಈ ಪ್ರಕರಣದಲ್ಲಿ ಆರೋಪಿತರು ಹೊರ ರಾಜ್ಯದವರಾಗಿದ್ದು ಕರ್ನಾಟಕ ರಾಜ್ಯದಲ್ಲಿ ಬೇಕಾಬಿಟ್ಟಿಯಾಗಿ ಬ್ಯಾಂಕ ಖಾತೆಗಳನ್ನು ತೆರೆದಿದ್ದು ಈ ಬಗ್ಗೆ ಅವರ ಖಾತೆ ತೆರೆಯಲು ಬ್ಯಾಂಕಗಳು ಯಾವುದೇ ರೀತಿಯ ಪರಿಶೀಲನೆ ಮಾಡದೇ ಬ್ಯಾಂಕ ಖಾತೆಗಳನ್ನು ನೀಡಿ ನಿರ್ಲಕ್ಷ್ಯತನ ತೋರಿರುವುದು ಕಂಡುಬಂದಿದ್ದು ಈ ಬಗ್ಗೆ ರಾಜ್ಯದ ಎಲ್ಲಾ ಬ್ಯಾಂಕಗಳ ಮುಖ್ಯಸ್ಥರಿಗೆ ಪತ್ರ ವ್ಯವಹಾರ ಮಾಡಲಾಗುವುದು.

ಯಾವುದೇ ಅಪರಿಚಿತ ಈ-ಮೆಲ್, ಮೊಬೈಲ್ ಕರೆಗಳು, ವಾಟ್ಸಪ್ ಸಂದೇಶ, ಫೇಸಬುಕ್ ಜಾಹಿರಾತು ಇವುಗಳಲ್ಲಿ ಉದ್ಯೋಗ ನೀಡುವುದು, ಬಹುಮಾನ ಬಂದಿದೆಯೆಂಬ ಸಂದೇಶ, ಲಕ್ಕಿ ಡಿಪ್‌ನಲ್ಲಿ ವಿಜೇತರಾಗಿದ್ದಾರೆಂದು ತಿಳಿಸುವುದು ಇತ್ಯಾದಿ ಆಮೀಷಗಳಿಗೆ ಒಳಗಾಗಿ, ಮೋಸ ಹೋಗದೇ ಇರಲು ಈ ಮೂಲಕ ಸಾರ್ವಜನಿಕರಿಗೆ ತಿಳಿಸಲಾಗಿದೆ.

ಈ ಪ್ರಕರಣದ ಆರೋಪಿತರ ಪತ್ತೆ ಕಾರ್ಯದಲ್ಲಿ ಕಾರವಾರ ಜಿಲ್ಲಾ ಪೊಲೀಸ ಅಧೀಕ್ಷಕರಾದ ಶ್ರೀ ಶಿವಪ್ರಕಾಶ ದೇವರಾಜ ಐ.ಪಿ.ಎಸ್, ಹಾಗೂ ಹೆಚ್ಚುವರಿ ಪೊಲೀಸ ಅಧೀಕ್ಷಕರಾದ ಶ್ರೀ ಎಸ್ ಬದರಿನಾಥ ಇವರ ಮಾರ್ಗದರ್ಶನದಲ್ಲಿ ಉತ್ತರ ಕನ್ನಡ ಜಿಲ್ಲಾ ಸಿ.ಇ.ಎನ್ ಅಪರಾಧ ಪೊಲೀಸ ಠಾಣಾ ನಿರೀಕ್ಷಕರಾದ ಸೀತಾರಾಮ ಪಿ, ಮತ್ತು ಸಿಬ್ಬಂದಿಗಳಾದ ಉಮೇಶ ನಾಯ್ಕ, ಸುದರ್ಶನ ನಾಯ್ಕ, ನಾಗರಾಜ ನಾಯ್ಕ, ಮಂಜುನಾಥ ಹೆಗಡೆ. ಹನುಮಂತ ಕಬಾಡಿ, ನಾರಾಯಣ ಎಮ್.ಎಸ, ಚಂದ್ರಶೇಖರ ಪಾಟೀಲ್, ಸುರೇಶ ನಾಯ್ಕ, ಸಂದೀಪ್ ನಾಯ್ಕ, ಶಿವಾನಂದ ತಾನಸಿ, ಭರತೇಶ ಸದಲಗಿ ಹಾಗೂ ಜಿಲ್ಲಾ ಪೊಲೀಸ ಕಛೇರಿಯ ಸಿಬ್ಬಂದಿಗಳಾದ ಸುಧೀರ ಮಡಿವಾಳ, ರಮೇಶ ನಾಯ್ಕ ನೇಯವರು ಪಾಲ್ಗೊಂಡಿರುತ್ತಾರೆ.

ಸಹಿ ಇದೆ/-
ಪೊಲೀಸ ಅಧೀಕ್ಷಕರು
ಉತ್ತರ ಕನ್ನಡ ಜಿಲ್ಲೆ, ಕಾರವಾರ